# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 75
2) ಸದಸ್ಯರ ಹೆಸರು : ಶ್ರೀ. ಕೆ. ಅಬ್ದುಲ್ ಜಬ್ಬಾರ್, (ನಾಮ ನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 20.12.2018
4) ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿ

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 3 ವರ್ಷಗಳ ರೈಲ್ವೆ ಅಪಘಾತದಲ್ಲಿ ಎಷ್ಟು ಮಂದಿ ಮೃತಪಟ್ಟಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)</td><td>ರೈಲ್ವೆ ಮಂತ್ರಾಲಯವು ನೀಡಿದ ಮಾಹಿತಿಯನ್ವಯ ರಾಜ್ಯದಲ್ಲಿ ಕಳೆದ 3 ವರ್ಷಗಳ ರೈಲ್ವೆ ಅಪಘಾತದಲ್ಲಿ 04 ಮಂದಿ ಮೃತಪಟ್ಟಿರುತ್ತಾರೆ.
<table>
<tr><th>ವರ್ಷ</th><th>ಜಿಲ್ಲೆ</th><th>ಮೃತಪಟ್ಟವರ ಸಂಖ್ಯೆ:</th></tr>
<tr><td>2015-16</td><td>-</td><td>00</td></tr>
<tr><td>2016-17</td><td>ಚಿತ್ರದುರ್ಗ</td><td>04</td></tr>
<tr><td>2017-18 ಈವರವಿಗೂ</td><td>-</td><td>00</td></tr>
<tr><td></td><td>ಒಟ್ಟು</td><td>04</td></tr>
</table></td></tr>
<tr><td>ಆ</td><td>ಇಂತಹ ಆಪಘಾತಗಳನ್ನು ತಡೆಗಟ್ಟಲು ರಾಜ್ಯ ಹಾಗೂ ರೈಲ್ವೆ ಇಲಾಖೆಯು ಕೈಗೊಂಡ ಕ್ರಮಗಳಾವುವು</td><td>ಈ ವಿಷಯವು ರೈಲ್ವೆ ಇಲಾಖೆಗೆ ಸಂಬಂಧಿಸಿದ್ದು, ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ. ರೈಲ್ವೆ ಇಲಾಖೆಯ “ಅಪಘಾತ ವಿಚಾರಣೆ ಸಮಿತಿಯ ಶಿಫಾರಸ್ಸಿನಂತೆ,” ಸಿಬ್ಬಂದಿ ಹಾಗೂ ಸಾರ್ವಜನಿಕರ ಸಮಾಲೋಚನಾ ಸಭೆಗಳನ್ನು ಆಗಿಂದಾಗ್ಗೆ ನಡೆಸಿ ಅಪಘಾತ ತಡೆಗಟ್ಟುವ ಮತ್ತು ದಂಡನೆಯನ್ನು ವಿಧಿಸುವ ಕ್ರಮಗಳ ಬಗ್ಗೆ ತಿಳುವಳಿಕೆ ನೀಡುವ ಕ್ರಮ ಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿದೆ.</td></tr>
<tr><td>ಇ</td><td>ಹಳಿ ಮತ್ತು ಸಿಗ್ನಲ್ ದಾಟುವ ವೇಳೆ ರೈಲಿಗೆ ಸಿಲುಕಿ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ಪರಿಹಾರ ನೀಡಲಾಗುವುದೇ:</td><td>ಇಲ್ಲ</td></tr>
<tr><td>ಈ</td><td>ರಾಜ್ಯ ಸರ್ಕಾರ ಅವರಿಗೆ ಅನುಕಂಪದ ಆಧಾರದ ಮೇಲೆ ಪರಿಹಾರ ನೀಡುವುದೇ? (ವಿವರ ನೀಡುವುದು)</td><td>ಅಂತಹ ಯಾವುದೇ ಪ್ರಸ್ತಾವನೆ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ</td></tr>
</table>

ಸಂಖ್ಯೆ: ಮೂಅಇ 162 ರಾರಾಹೆ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿ